ಶ್ರೀ ವಿ. ಎಂ. ಫಾಡಿ.—ಸ್ವಾಮಿ, ಈಗ ನಳಿಯಾಳ, ಮುಂಡಗೋಡ್ ತಾಲ್ಲೂಕುಗಳನ್ನು ಮಾತ್ರ ಬಿಟ್ಟಿದ್ದಾರೆ. ಈ ಎರಡೂ ತಾಲ್ಲೂಕುಗಳನ್ನು ಅದರಲ್ಲಿ ಕೂಡಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಅದನ್ನು ಪರಿಶೀಲನೆ ಮಾಡೋಣ.

**Amount Collected by the Market Committee Khanapur at Nandgad for Roads and Bridges.—**

303. SRI N.B.SIRDESAI(Khanapur).—Will the Minister of State for Marketing and Muzari be pleased to state :—

(*a*) since the inception, what amount has been collected by the Market Committee Khanapur taluk, at Nandgad from the Ryots towards the Roads and Bridges. Yearwise breaking should be given ;

(*b*) the amount utilised so far for the Road, and bridges in Khanapur Taluk?

SRI SUDHENDRA RAO KASABE (Minister of State for Marketing and Muzari).—

(*a*) The sellers' market fee was collected by the Agricultural Produce Market Committee, Nandgad as per Section 65 (1) of the Karnataka Agril. Produce Marketing (Regulation) Act 1966, amended vide Government Notification No. LAW 27 LGN 75, dated 19-5-1975. The collection of sellers market fee has come into force with effect from 19-5-1975. An amount of Rs. 1,50,579,-89 was collected by the Market Committee, Nandgad, Khanapur Taluk and the same was credited to "Karnataka Roads and Bridges Fund" as per sec. 65(3). The yearwise break-up is as follows :

| | Year | | Amount collected from sellers |
|---|---|---|---|
| 1. | 1975-76 | ... | Rs. 62,548-36 |
| 2. | 1976-77 | ... | Rs. 54,462-70 |
| 3. | 1977-78 | ... | Rs. 30,706-93 |
| 4. | 1978-79 | ... | Rs. 1,861-90 |
| | | | Total Rs. 1,50,579-89 |

(*b*) The following amount of Rs. 4,13,316 was utilised for construction of Roads as per I.C.R.C. programme.

| Sl. No. | Road from and to | Distance in Kms. | Amount |
|---|---|---|---|
| 1. | Garlgunji to join Khanapur | 10.5 | Rs. 1,86,770 |
| 2. | Kasaba Nandgad to Buttawdi to Sagare | 5.4 | Rs. 84,338 |
| 3. | Approach Road to Nagarda village | 2.2 | Rs. 55,700 |
| 4. | Bijagarni to Amagadi | 4.0 | Rs. 65,700 |
| 5. | Bhuranki to Gundangatti | 3.0 | Rs. 20,808 |
| | | Total Rs. | 4.13,316 |

SRI N. B. SIRDESAI.— Sir, kindly direct the Hon'ble Minister to answer in English. I cannot follow Greek and Latin.

ಶ್ರೀ ಪಿ. ರಾಮದೇವ್.— ಅಧ್ಯಕ್ಷರೇ, ಕನ್ನಡವನ್ನು ಮಾನ್ಯ ಸದಸ್ಯರು ಗ್ರೀಕ್ ಮತ್ತು ಲ್ಯಾಟಿನ್ ಎಂದು ಹೇಳುತ್ತಿದ್ದಾರೆ, ಇದು ಸರಿಯಲ್ಲ.

SRI N. B. SIRDESAI.— May I know Sir, in which year the Agricultural Produce Maeket Committee was registered and prior to the enforcement of market fee, what was the source of income to the Committee.

† ಶ್ರೀ ಸುಧೀಂದ್ರ ರಾವ್ ಕಸಬೆ.— ಅಧ್ಯಕ್ಷರೆ, ಇದುವರೆಗೂ ಇನ್‌ಕಮ್ ಇರತಕ್ಕುದ್ದು ೪, ೧೩, ೩೧೬ ರೂಪಾಯಿ ಮಾತ್ರ.

SRI N. B. SIRDESAI.— Whether the accounts of the Committee have been maintained and if so, whether the same have been audited by the Dapartment.

ಶ್ರೀ ಸಂಧೀಂದ್ರ ರಾವ್ ಕಸಬೆ.—ಅಧ್ಯಕ್ಷರೆ, ಈ ೪, ೧೩, ೩೧೬ ರೂಪಾಯಿ ಇನ್‌ಕಮ್ ಆಡಿಟ್ ಆಗಿದೆ.

SRI N. B. SIRDESAI.— I could not follow, Whether the Government is aware of the fact that the amount shown in answer (b) has not at all been spend on the construction of roads and that the same has been spent somewhere else?

ಶ್ರೀ ಸಂಧೀಂದ್ರ ರಾವ್ ಕಸಬೆ.— ಅಧ್ಯಕ್ಷರೆ, ಈ ಪ್ರಶ್ನೆ ಲೋಕೋಪಯೋಗಿ ಇಲಾಖೆಗೆ ಸೇರಿದ್ದು. ಇವರು ಮೊದಲು ಪೊತ್ತವನ್ನು ಮಾತ್ರ ಕೇಳಿದ್ದು. ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕಳುಹಿಸಿದರೆ ಉತ್ತರ ಕೊಡುತ್ತೇನೆ.

SRI B. B. SAYANAK.— I request the Hon'ble Speaker and the Hon'ble Chief Minister to make some arrangements to translate Kannada into English. This arrangement exists in Parliament also.

MR. SPEAKER.— I do not want to waste the time. Next question please.

SRI N. B. SIRDESAI.— Whether the Government can provide me the break-up figures of amounts allotted under I.C.R.C. programme andKarnataka Roads and Bridges Fund?

ಶ್ರೀ ಸುಧೀಂದ್ರ ರಾವ್ ಕಸಬೆ.— ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಕೇಳುತ್ತಾ ಇರತಕ್ಕ ಪ್ರಶ್ನೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಅವರು ಈ ಪ್ರಶ್ನೆಯನ್ನು ಮೊದಲೇ ಕೇಳಿದ್ದರೆ ಲೋಕೋಪಯೋಗಿ ಇಲಾಖೆಯಿಂದ ಉತ್ತರವನ್ನು ತರಿಸಬಹುದಾಗಿತ್ತು. ಮಾನ್ಯ ಸದಸ್ಯರು ಇದರ ಬಗ್ಗೆ ಬೇರೆ ಪ್ರಶ್ನೆಯನ್ನು ಕಳುಹಿಸಿದರೆ ನಾನು ಉತ್ತರ ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

**Pensionary and other Service Benifits to Teachers of Private High Schools in North Kanara District.**

334. SRI BHAVU RAO DESHPANDE (Dharwad).— Will the Minister for Education be pleased to state :

(*a*) whether it has come to the notice of the Government that the demands have been received from the teachers of the Private High Schools of North Canara District, for grant of Pension and other benifits to them on par with Government High School teachers;

(*b*) if so, the action taken by the Government so far in this regard ?

SRI G. B. SHANKAR RAO (Minister for Education).—

(*a*) Yes.

(*b*) These demands are under consideration of the Government.

ಶ್ರೀ ಭಾವುರಾವ್ ದೇಶಪಾಂಡೆ.— ಅಧ್ಯಕ್ಷರೆ, ಈಗ ಉತ್ತರ ಕರ್ನಾಟಕ ಜಿಲ್ಲೆಯಲ್ಲಿಯಂ ಖಾಸಗಿ ಪ್ರೌಢಶಾಲೆಯ ಶಿಕ್ಷಕರು ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರಿಗೆ ಯಾವ ರೀತಿ ಪೆನ್‌ಷನ್, ಗ್ರಾಚ್ಯುಟಿ ಈ ಮನೆ ಬಾಡಿಗೆ ಸೌಲಭ್ಯ ಇತ್ಯಾದಿ ಸೌಲಭ್ಯಗಳು ಏನಿವೆ ಅವುಗಳೆಲ್ಲಾ ತಮಗೂ ಸಿಗಬೇಕೆಂದು ಕೇಳಿರುವು ದಕ್ಕೆ ಅದಂ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈಗ ಇದು ಯಾವ ಹಂತದಲ್ಲಿದೆ ಅಥವಾ ಇದನ್ನು ಬೇಗ ಮಾಡಲಿಕ್ಕೆ ಸರ್ಕಾರಕ್ಕೆ ಏನಾದರೂ ಅಡಚಣೆ ಇದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಿ. ಶಂಕರ್ ರಾವ್.— ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಶಿಕ್ಷಕರು ೧೯೭೯ನೇ ಡಿಸೆಂಬರ್‌ನಲ್ಲಿ ಒಂದು ಮನವಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕ ಮನವಿಯಲ್ಲಿ ಸಾಕಷ್ಟು ಬೇಡಿಕೆಗಳು ಇವೆ. ಅವರ ಬೇಡಿಕೆಗಳಲ್ಲಿ ಪ್ರಮುಖವಾದ ಬೇಡಿಕೆಗಳು ಐದಾರು ಇವೆ. ಒಂದು, ನಿವೃತ್ತಿ ವೇತನವನ್ನು ಶೇಕಡಾ ೫೦ರಷ್ಟು ಮಾಡಬೇಕು ಅಂತ ಇದೆ. ಇದರ ಬಗ್ಗೆ ಈಗಾಗಲೇ ಹೇಳಿ ಬಿಟ್ಟಿದ್ದೇವೆ. ಸರ್ಕಾರಿ ನೌಕರನಿಗೆ ಏನು ನಿವೃತ್ತಿ ವೇತನ ಕೊಡುತ್ತಿದ್ದೇವೆ. ಅಂದರೆ ಅವರು ಕೊನೇ ತಿಂಗಳಂ ಸಂಬಳ ಏನು ತೆಗೆದುಕೊಳ್ಳುತ್ತಾರೆ ಆ ಸಂಬಳದ ಅರ್ಧದಷ್ಟು ಭಾಗ ಮಾತ್ರ ನಿವೃತ್ತಿ ವೇತನ ಇರತಕ್ಕದ್ದು ಎಂದು ಹೇಳಿದ್ದೇವೆ. ಇದನ್ನು ಖಾಸಗಿ ಶಿಕ್ಷಕರಿಗೂ ಕೂಡ ಮಾಡಿಕೊಡುತ್ತೇವೆ.

ಗ್ರಾಚ್ಯುಟಿಯ ವಿಚಾರದಲ್ಲಿ ಅವರು ನಮ್ಮ ಜೊತೆ ಚರ್ಚೆ ಮಾಡಿದ ಬಳಿಕ ಅದಕ್ಕೆ ನಾವು ಒಪ್ಪಿ ಕೊಂಡಿದ್ದೇವೆ. ಮ್ಯಾನೇಜ್‌ಮೆಂಟಿನವರು ೧ ಲಕ್ಷದ ೨೫ ಸಾವಿರ ರೂ.ಗಳನ್ನು ಕೊಟ್ಟರೆ ಸಾಕಾಗುತ್ತದೆ